ದಿನಾಂಕಃ 17.09.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಯು ಎಸ್ ಎಸ್ ವಕೀಲರಿಂದ-**

ನಾನು 1986 ರಿಂದ ಇಲ್ಲಿಯವರೆಗೆ ಫಿರ್ಯಾದಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸದರಿ ಸಂಸ್ಥೆಯು ಮೊದಲು ಫೈನಾನ್ಸ ಅಂತಾ ಇತ್ತು, 2015 ರಲ್ಲಿ ಚಿಟ್ ಫಂಡ್ ಆಗಿದ್ದು ಅಂದಿನಿಂದ ನಾನು ವ್ಯವಸ್ಥಾಪಕ ಅಂತಾ ಕೆಲಸ ಮಾಡುತ್ತಿದ್ದೇನೆ. ನಮ್ಮ ಸಂಸ್ಥೆಯು ಕೇವಲ ಜಮಖಂಡಿಯಲ್ಲಿಯೇ ಮಾತ್ರ ಕಛೇರಿ ಹೊಂದಿರುತ್ತದೆ ಬೇರೆ ಕಡೆ ಶಾಖೆ ಇರುವುದಿಲ್ಲ ನಮ್ಮ ಸಂಸ್ಥೆಗೆ ಚಂದ್ರಶೇಖರ ಇಟ್ಟಿ ಹಾಗೂ ಸದಾನಂದ ಜೋಶಿ ಇವರಿಬ್ಬರು ಮಾತ್ರ ನಿರ್ದೇಶಕರು ಅಂತಾ ಇರುತ್ತಾರೆ. ನಮ್ಮ ಸಂಸ್ಥೆಗೆ ಅಂದಾಜು 100 ಜನಕ್ಕಿಂತ ಹೆಚ್ಚು ಸದಸ್ಯರು ಇರುತ್ತಾರೆ. ನನ್ನನ್ನು ಸೇರಿಸಿ ನಮ್ಮ ಸಂಸ್ಥೆಯಲ್ಲಿ 6 ಜನ ಸಿಬ್ಬಂದಿ ಇರುತ್ತಾರೆ. ಸಂಸ್ಥೆ ಪ್ರಾರಂಭವಾದಾಗಿನಿಂದ ನಾನೇ ವ್ಯವಸ್ಥಾಪಕ ಇರುತ್ತೇನೆಂದರೆ ಸರಿ. ಉಳಿದ 5 ಜನ ಸಿಬ್ಬಂದಿ ವಸೂಲಾತಿ ಕುರಿತು ಇರುತ್ತಾರೆ.

1 ಲಕ್ಷ 50 ಸಾವಿರ ರೂಪಾಯಿ ಚಿಟ್ ಇದ್ದರೆ ಅದಕ್ಕೆ 30 ಜನ ಸದಸ್ಯರು ಇರುತ್ತಾರೆ. ಅದಕ್ಕೆ ಪ್ರತಿ ತಿಂಗಳು ಒಬ್ಬ ಸದಸ್ಯ 5 ಸಾವಿರ ರೂಪಾಯಿ ನೀಡಬೇಕಾಗುತ್ತದೆ. ಸದರಿ ಚಿಟ್ ಅವಧಿ 30 ತಿಂಗಳು ಇರುತ್ತದೆ. ನಾವು ಪ್ರತಿ ತಿಂಗಳು ಚೀಟಿ ತುಂಬಿದವರ ಹಣವನ್ನು ಬಿಡ್ ಮೂಲಕ ಹಂಚಿಕೆ ಮಾಡುತ್ತೇವೆ. ಚೀಟಿ ಹಣವನ್ನು 1 ತಿಂಗಳಿಗೆ ಒಬ್ಬರಿಗೆ ಮಾತ್ರ ನೀಡುತ್ತೇವೆ ಒಂದು ತಿಂಗಳಿನಲ್ಲಿ ಹಣದ ಬೇಡಿಕೆಯನ್ನು ಗುಂಪಿನ ಸದಸ್ಯರಲ್ಲಿ ಬೇಡಿಕೆಯನ್ನು ಹೆಚ್ಚಿನ ಜನ ಮಾಡಿದ್ದರೆ ನಾವು ಚೀಟಿ ಮೂಲಕ ಆರಿಸಿ ಒಬ್ಬರಿಗೆ ಮಾತ್ರ ಆ ತಿಂಗಳ ಹಣ ನೀಡುತ್ತೇವೆ

ಗುಂಪಿನಲ್ಲಿರುವ ಸದಸ್ಯ ಅವಶ್ಯಕತೆ ಇದ್ದಲ್ಲಿ 45 ಸಾವಿರ ರೂಪಾಯಿ ವರೆಗೆ ಕೇಳಿ ಹಣ ಪಡೆದುಕೊಳ್ಳುತ್ತಾರೆ. ಗುಂಪಿನ ಸದಸ್ಯ ಬಿಡ್ ಮಾಡಿದಾಗ ಬಿಡ್‌ನಲ್ಲಿ ಬಂದ ಸದಸ್ಯನಿಗೆ ನಾವು 1 ಲಕ್ಷ 5 ಸಾವಿರ ರೂಪಾಯಿ ಮಾತ್ರ ನೀಡುತ್ತೇವೆಂದರೆ ಸರಿ. ನಮ್ಮ ಸಂಸ್ಥೆಯ ಸದಸ್ಯನಾಗಬೇಕಾದರೆ ಅಂತಹ ವ್ಯಕ್ತಿ ವ್ಯವಹಾರಸ್ಥನಾಗಿರಬೇಕು.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ